


ಹುಬ್ಬಳ್ಳಿಯ ಡೆನಿಸನ್ಸ್ ಹೊಟೆಲ್‌ದಲ್ಲಿ ಕೃಷ್ಣ ಮಿಲ್ಕ್ಸ್ ಡೇರಿಯ ಬೆಳ್ಳಿಹಬ್ಬ ಸಮಾರಂಭ ಜರುಗಿತು.

# ಶ್ರೀಕೃಷ್ಣ ಮಿಲ್ಕ್ ಡೇರಿ ಬೆಳ್ಳಿಹಬ್ಬ

**ಹುಬ್ಬಳ್ಳಿ,ಜು.11:** ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿರುವ ಶ್ರೀಕೃಷ್ಣ ಮಿಲ್ಕ್ಸ್ ಡೇರಿಗೆ 25ವರ್ಷಗಳಾದ ಹಿನ್ನೆಲೆಯಲ್ಲಿ ನಗರದ ಗೋಕುಲ ರಸ್ತೆಯಲ್ಲಿರುವ ಡೆನಿಸನ್ಸ್ ಹೊಟೆಲ್‌ದಲ್ಲಿ ಗುರುವಾರ ಬೆಳ್ಳಿಹಬ್ಬದ ಸಮಾರಂಭ ಜರುಗಿತು.

ಐ.ಟಿ.ಉದ್ಯಮಿ ವಿವೇಕ ಪವಾರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀಕೃಷ್ಣ ಸಂಸ್ಥೆಯ ನಿರ್ದೇಶಕರಾದ ಪ್ರದೀಪ ಪೈ, ದಿನೇಶ್ ಆರ್ ಪೈ, ಹನುಮಂತ ಎಂ.ಪೈ, ಶ್ಯಾಮ ಕಾಮತ್. ಮಹೇಶ ಕಾಮತ್. ಶ್ರೀಕೃಷ್ಣ ಸಂಸ್ಥೆಯ ಸಿಬ್ಬಂದಿ , ಹಾಲು ವಿತರಕರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ನೂತನ ಗುಲಾಬ್ ಜಾಮೂನ್, ರಸಗುಲ್ಲ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು.